ಶುಭೋದಯವ ಸಾರಿದೆ’... ಈ ಹಾಡಿನಲ್ಲಿ ಬೆಳಕಿನ ಹಬ್ಬದ ಇಡೀ ಸೌಂದರ್ಯವೇ ಅಡಗಿದ್ದು, ಕೇಳಲು ಆಪ್ಯಾಯಮಾನವಾಗಿದೆ.

## ದೀಪ ಬೆಳಗಿಸಿ ನಾದ ಮೊಳಗಿಸಿ

ಶ್ರಾವಣ ನಂತರ ಪಂಚಾಂಗ ಶ್ರವಣದ (ಯುಗಾದಿ)ವರೆಗೆ ಹಬ್ಬಗಳದ್ದೇ ಸಂಭ್ರಮ. ನಾಡಿನುದ್ದಕ್ಕೂ ದಸರೆಯ ವೈಭವ, ಸಡಗರ ಮುಗಿಯುತ್ತಿದ್ದಂತೆ ಈಗ ದೀಪಾವಳಿಗೆ ಸಜ್ಜಾಗುವ ಸಮಯ ಸನ್ನಿಹಿತವಾಗುತ್ತಿದೆ. ಮಹಿಳೆಯರಿಗಂತೂ ಹಬ್ಬದ ಆಚರಣೆಯ ಜೊತೆಗೆ ಸಿಹಿಯಡುಗೆ, ಹೊಸ ಉಡುಗೆಯಂತಹ ಹಬ್ಬದ ತಯಾರಿಯಲ್ಲಿ ಸಮಯ ಸರಿಯುವುದೇ ತಿಳಿಯುವುದಿಲ್ಲ. ಈ ಎಲ್ಲ ಸಂಭ್ರಮದ ಮಧ್ಯೆ ‘ದೊಡ್ಡ ಹಬ್ಬ’ ದೀಪಾವಳಿಗೆ ಹಾಡುಗಳ ಸಾಥಿ ಇಲ್ಲದಿದ್ದರೆ ಹೇಗೆ? ದೀಪ ಬೆಳಗಿಸಿ, ನಾದ ಮೊಳಗಿಸಿದರೆ ಹಬ್ಬದ ಸಂಭ್ರಮ ಇಮ್ಮಡಿಯಾದಂತೆಯೇ.

ಹೃದಯಕ್ಕೆ ಹತ್ತಿರವಾಗಿರುವ ಹಾಡುಗಳು ಕಿವಿಗೆ ಇಂಪನ್ನು ನೀಡಿದರೆ ಸಿಹಿತಿಂಡಿ, ಪಟಾಕಿ, ಎಣ್ಣೆಸ್ನಾನ, ಸಾಲು ಸಾಲು ಹಣತೆಗಳ ವೈಭವವನ್ನು ಮೆರೆಯುವ ಹಬ್ಬ ಕಳೆಕಟ್ಟುತ್ತದೆ.

ಅಡುಗೆ ಮನೆಯಲ್ಲಿ ಘಮಘಮದ ರಸಗವಳವಾದರೆ, ಪೂಜೆ ಪುನಸ್ಕಾರದ ಮಧ್ಯೆ ಸಪ್ತಸ್ವರಗಳ ಸಂಗಮ ಶ್ರವಣಾನಂದಕರವೂ ಆಗಿರುತ್ತದೆ. ದೀಪಾವಳಿ ಹಬ್ಬದ ಬಗ್ಗೆಯೇ ಇರುವ ಸಂಗೀತ ಶಾಸ್ತ್ರೀಯ, ಲಘು ಶಾಸ್ತ್ರೀಯ, ಚಿತ್ರಸಂಗೀತ, ಭಕ್ತಿ ಸಂಗೀತ, ವಾದ್ಯ ಸಂಗೀತ, ಅಭಂಗ ಮುಂತಾದವು ಗಂಧರ್ವಲೋಕವನ್ನು ಸೃಷ್ಟಿಸುವುದು ಖಂಡಿತ. ಇಷ್ಟೇ ಅಲ್ಲದೆ ಸಂಗೀತ ವಾದ್ಯಗಳಾದ ನಾದಸ್ವರ, ಡೋಲಕ್, ತವಿಲ್, ಶೆಹನಾಯ್ ಕೂಡ ದೀಪಾವಳಿ ಹಬ್ಬದ ದಿನಗಳಲ್ಲೇ ವಿಶೇಷವಾಗಿ ನುಡಿಸುವ, ಮಧುರ ನಾದವನ್ನು ಕೊಡುವ ಮಂಗಳಕರ ವಾದ್ಯಗಳಾಗಿವೆ.

## ಶ್ಲೋಕಗಳಲ್ಲಿ ದೀಪ

ಬೆಳಕು ಕತ್ತಲೆಯನ್ನು ಹೋಗಲಾಡಿಸುವಂತೆಯೇ, ಅಜ್ಞಾನವನ್ನು ಹೋಗಲಾಡಿಸುವುದು ಅರಿವು ಅಥವಾ ಜ್ಞಾನದೀವಿಗೆ. ಅಜ್ಞಾನವನ್ನು ಕಳೆದು ಜ್ಞಾನ ಮಾರ್ಗವನ್ನು ಅನುಸರಿಸಲು ದೀಪ ಬೆಳಗುವ ಪರಿಪಾಟ ನಮ್ಮಲ್ಲಿದೆ. ದೀಪ ಹಚ್ಚುವಾಗ ಪ್ರಮುಖ ಶ್ಲೋಕ ನೆನಪಿಗೆ ಬರಲೇಬೇಕು. ‘ಶುಭಂ ಕರೋತಿ ಕಲ್ಯಾಣಂ, ಆರೋಗ್ಯಂ ಧನ ಸಂಪದಃ ಶತ್ರು ಬುದ್ಧಿ ವಿನಾಶಾಯ, ದೀಪಜ್ಯೋತಿ ನಮೋನಮಃ.’ ಎಂಥ ಅರ್ಥಪೂರ್ಣವಾದ ಶ್ಲೋಕವಿದು. ಇದು ದೀಪದ ಬೆಳಕನ್ನು ಕಲ್ಯಾಣ, ಆರೋಗ್ಯ, ಧನ, ಸಂಪತ್ತು ಮತ್ತು ಶತ್ರು ಬುದ್ಧಿಯನ್ನು ನಾಶ ಮಾಡುವ ಶಕ್ತಿಯಾಗಿ ಸ್ತುತಿಸುತ್ತದೆ.

## ‘ಯಕ್ಷ ದೀಪಾವಳಿ’ ಸೊಗಸು

ಹಾಗೆ ನೋಡಿದರೆ ದೀಪಾವಳಿಯ ಮೂಲವೇ ಯಕ್ಷ ಮತ್ತು ಗಂಧರ್ವ ಆಚರಣೆಯ ಉಗಮ ಎನ್ನುತ್ತದೆ ಇತಿಹಾಸ. ಹೀಗಾಗಿ ದೀಪಾವಳಿ ಹಬ್ಬವನ್ನು ‘ಯಕ್ಷರ ಆಚರಣೆ’ ಎನ್ನಲಾಗುತ್ತದೆ. ಈ ಹಬ್ಬವನ್ನು ಪ್ರಾಚೀನ ಕಾಲದಿಂದಲೂ ಆಚರಿಸಲಾಗುತ್ತಿದ್ದು, ಆಚರಣೆಯಲ್ಲಿ ಕೊಂಚ ಮಾರ್ಪಾಡು ಇದ್ದರೂ ಪಾರಂಪರಿಕ ಮೂಲವನ್ನೇ ಇಟ್ಟುಕೊಂಡು ಬೆಳಕಿನ ಹಬ್ಬ ಆಚರಿಸಲಾಗುತ್ತದೆ.

ಹಬ್ಬದ ನೆಪದಲ್ಲಿ ತೆಂಕು ತಿಟ್ಟು, ಬಡಗು ತಿಟ್ಟು ಯಕ್ಷ ಕಲಾವಿದರು ಪೌರಾಣಿಕ ಕಥಾಹಂದರವನ್ನು ಹೊತ್ತ ಪ್ರಸಂಗಗಳನ್ನು ದೊಂದಿ, ದೀವಿಗೆಗಳೊಂದಿಗೆ ರಂಗದಲ್ಲಿ ತಂದು ಗಂಧರ್ವಲೋಕವನ್ನೇ ಸೃಷ್ಟಿಸುವುದನ್ನು ಮರೆಯುವಂತೆಯೇ ಇಲ್ಲ.

## ನಾಟ್ಯಕ್ಕೂ ಬೆಳಕಿನ ಸ್ಪರ್ಶ

ದಕ್ಷಿಣ ಭಾರತದ ಶಾಸ್ತ್ರೀಯ ನೃತ್ಯ ಪ್ರಕಾರವಾದ ಭರತನಾಟ್ಯದಲ್ಲೂ ಬೆಳಕಿನ ಚಲನೆ ಇದೆ. ನಾಟ್ಯ ಕಲಾವಿದೆ ದೀಪವನ್ನು ಕೈಗಳಲ್ಲಿ ಹಿಡಿದು ಅಡವುಗಳನ್ನು ಹಾಕುತ್ತಾ, ನೃತ್ಯಾಭಿನಯ ಮಾಡುವುದು ನೋಡಲು ಕಣ್ಣುಗಳೇ ಸಾಲದು. ಇಲ್ಲಿ ಭಕ್ತಿ ಇದೆ, ಆಧ್ಯಾತ್ಮಿಕತೆಯಿದೆ, ಚಿಂತನೆಯಿದೆ, ಲಾಲಿತ್ಯದ ಸೊಗಡಿದೆ, ಭಾವದ ಬಿಂಬವಿದೆ. ಮೇಲಾಗಿ ಕಲೆಯ ಸ್ಪರ್ಶ ಚಲನೆಯಲ್ಲಿ ಅನಾವರಣಗೊಳ್ಳುತ್ತದೆ.

ಗಣೇಶ ಸ್ತುತಿ, ರಾಧಾ–ಕೃಷ್ಣರ ಪ್ರಸಂಗಗಳು, ದುರ್ಗೆಯ ಅವತಾರ, ಶಿವನ ತಾಂಡವ ನೃತ್ಯ... ಎಲ್ಲದರಲ್ಲೂ ಹೊರಹೊಮ್ಮುವುದು ಭಕ್ತಿಯ ಭಾವನೆಯೇ.

## ಸಿನಿಮಾಗಳಲ್ಲೂ ದೀಪಾವಳಿ ವೈಭವ

ಸಿನಿಮಾ ಹಾಡುಗಳಂತೂ ದೀಪಾವಳಿಯ ಪ್ರಭಾವಳಿಯನ್ನು ಎತ್ತಿಹಿಡಿಯುವಂತಿವೆ. ಸ್ಯಾಂಡಲ್‌ವುಡ್‌ನ ‘ಮುದ್ದಿನ ಮಾವ’ ಸಿನಿಮಾದಲ್ಲಿ ಬರುವ ‘ದೀಪಾವಳಿ, ದೀಪಾವಳಿ ಗೋವಿಂದ ಲೀಲಾವಳಿ...’ ಹಾಡು ಮಧುರಾತಿಮಧುರ. ‘ನಂಜುಂಡಿ’ ಸಿನಿಮಾದ ‘ದೀಪದಿಂದ ದೀಪವ ಹಚ್ಚಬೇಕು ಮಾನವ...’ ಹಾಡು ದೀಪಾವಳಿಯ ಸಡಗರದ ಜೊತೆಗೆ ಮಾನವೀಯ ಸಂಬಂಧದ ಸೂಕ್ಷ್ಮ ಸಂವೇದನೆಯನ್ನೂ ಅಭಿವ್ಯಕ್ತಿಸುತ್ತದೆ.



ಬಾಲಿವುಡ್ ಸೂಪರ್ ಹಿಟ್ ಸಿನಿಮಾ ‘ಚಿಚ್ಚೋರ್’ನಲ್ಲಿ ಖ್ಯಾತ ಗಾಯಕ ಕೆ.ಜೆ. ಯೇಸುದಾಸ್ ಅವರು ಹಾಡಿರುವ ‘ಜಬ್ ದೀಪ್ ಜಲೇ ಆನಾ..’ ಹಾಡು ಆಗಿರಲಿ, 1957ರಲ್ಲಿ ಬಿಡುಗಡೆಯಾದ ‘ಪೈಸಾ’ ಚಿತ್ರದ ‘ದೀಪ್ ಜಲೇಂಗೆ ದೀಪ್ ದೀಪಾವಳಿ ಆಯಿ ಹೋ’, ಹಾಡು ದೀಪಾವಳಿಯನ್ನು ಮತ್ತಷ್ಟು ಸೊಗಸಾಗಿಸುತ್ತದೆ.

## ರಂಗೋಲಿ ಕಲೆಯಲ್ಲಿ ದೀಪ

ದೀಪಾವಳಿಯ ಪ್ರಭಾವಳಿ ಮನೆಮುಂದೆ ಹಾಕುವ ರಂಗೋಲಿಯಲ್ಲೂ ಅಡಗಿದೆ. ಹಬ್ಬದ ದಿನ ವಿಶೇಷವಾಗಿ ಹಾಕುವ ಚುಕ್ಕಿ ರಂಗೋಲಿ, ಎಳೆ ರಂಗೋಲಿಗಳ ಮೇಲೆ ದೀಪಗಳ ಅಲಂಕಾರ ಮಾಡಿದರೆ ಅದೆಷ್ಟು ಮನಮೋಹಕ! ರಂಗೋಲಿಯ ಕಲೆಯ ಪರಿಕಲ್ಪನೆ, ಚಿಂತನೆ ಅಡಗಿರುವುದು ಬೆರಳುಗಳಿಂದ ಸರಾಗವಾಗಿ, ಚಕಚಕನೆ ಮೂಡುವ ರಂಗೋಲಿಯ ಚಿತ್ತಾರದಿಂದಲೇ. ನೋಡುನೋಡುತ್ತಿದ್ದಂತೆ ಹೂವಿನ ವಿನ್ಯಾಸ, ಎಲೆ, ಬಳ್ಳಿಯ ವಿನ್ಯಾಸ, ಓಂ, ಸ್ವಸ್ತಿಕದಂತಹ ಆಧ್ಯಾತ್ಮ ಚಿಂತನೆಯ ವಿನ್ಯಾಸ. ಅಷ್ಟೇ ಏಕೆ, ನವಿಲಿನ ವಿನ್ಯಾಸ, ಅದಕ್ಕೆ ನವಿಲಿನದ್ದೇ ಬಣ್ಣ. ನೋಡಲು ಚೆಂದ. ಈ ಎಲ್ಲ ರಂಗೋಲಿ ಮೇಲೆ ಹಣತೆಗಳನ್ನು ಇಟ್ಟು ಮಾಡುವ ವಿನ್ಯಾಸ ಹಬ್ಬದ ವೈಭವವನ್ನು ಸಾರುವ ಪರಿ ಅವರ್ಣನೀಯ.

ಕಲೆಯೊಂದಿಗೆ ಹಾಸುಹೊಕ್ಕಾಗಿರುವ ಬೆಳಕಿನ ಬಗ್ಗೆ ಇಷ್ಟು ಹೇಳಿದ ಮೇಲೆ ದೀಪ ಎಂದರೆ ಏನು ಎಂಬ ವ್ಯಾಖ್ಯಾನವನ್ನು ಸಂಕ್ಷಿಪ್ತವಾಗಿ ಹೇಳದಿದ್ದರೆ ಹೇಗೆ? ಹಾಂ... ದೀಪ ಜೀವನದ ಒಂದು ಸಕಾರಾತ್ಮಕ ಬೆಳವಣಿಗೆ. ದೀಪ ಎಂದರೆ ಶಾಂತಿ, ದೀಪ ಎಂದರೆ ಸಮೃದ್ಧಿ, ದೀಪ ಎಂದರೆ ಬೆಳಕು, ದೀಪ ಎಂದರೆ ಆರೋಗ್ಯ, ದೀಪ ಎಂದರೆ ಸಂಪತ್ತು, ದೀಪ ಎಂದರೆ ಪ್ರಖರತೆ..

ದೀಪಾವಳಿ ಮಾತ್ರವಲ್ಲ, ಜೀವನದುದ್ದಕ್ಕೂ ದೀಪ ಬೆಳಗಿದರೆ ನಮ್ಮ ಬದುಕಿಗೊಂದು ಅರ್ಥ, ಬದುಕಿಗೆ ನೆಮ್ಮದಿ, ಶಾಂತಿ. ಹಾಗಾದರೆ ದೀಪ ಬೆಳಗಿಸಿ ಮನೆ–ಮನ ಬೆಳಗೋಣ ಅಲ್ಲವೇ?




ಪ್ರತಿಕ್ರಿಯಿಸಿ: feedback@sudha.co.in